# ಕರ್ನಾಟಕ ಸರ್ಕಾರದ ನಡವಳಿಗಳು

| | |
|---|---|
| ವಿಷಯ: | 2009-10ನೇ ಸಾಲಿನಲ್ಲಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ವಿತರಿಸುವ ಬಗ್ಗೆ. |
| ಓದಲಾಗಿದೆ:- | 1. ಸರ್ಕಾರದ ಆದೇಶ ಸಂಖ್ಯೆ ಇಡಿ 76 ಯೋಯೋಕ 2009, ದಿನಾಂಕ: 28-04-2009.<br><br>2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರುರವರ ಏಕಕಡತ ಸಂಖ್ಯೆ ಯೋ10/ಉಬೈವಿಯೋ 01/2009-10/ ದಿನಾಂಕ: 15-01-2009 |

~~~~

**ಪ್ರಸ್ತಾವನೆ:-**

1. ಮೇಲೆ (1) ರಲ್ಲಿ ಓದಲಾದ ದಿನಾಂಕ:28-04-2009ರ ಸರ್ಕಾರಿ ಆದೇಶದಲ್ಲಿ 2009-10ನೇ ಸಾಲಿಗೆ ನಗರ ಪಾಲಿಕೆಗಳ ಸರಹದ್ದಿನಲ್ಲಿ ಬರುವ ಶಾಲೆಗಳನ್ನು ಹೊರತು ಪಡಿಸಿ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ ಉಚಿತವಾಗಿ ಬೈಸಿಕಲ್ ಗಳನ್ನು ವಿತರಿಸುವ ಸಲುವಾಗಿ ಟೆಂಡರನ್ನು ಅಂತಿಮಗೊಳಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ಏಕ ಕಡತದಲ್ಲಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು, ಬಿಡ್‌ದಾರರು, ಲಿಖಿತವಾಗಿ ಗಂಡು ಮತ್ತು ಹೆಣ್ಣು ಮಕ್ಕಳ ಬೈಸಿಕಲ್‌ಗಳಿಗೆ ಒಂದೇ ದರ ನೀಡಲು [ರೂ.2390.00] ಒಪ್ಪಿರುವುದಾಗಿ ತಿಳಿಸಿ, ಕಳೆದ ವರ್ಷಕ್ಕಿಂತ ಪ್ರತಿ ಬೈಸಿಕಲ್‌ಗೆ 7.00ರೂಗಳಷ್ಟು ಕಡಿಮೆ ಇರುತ್ತದೆ. ಬಿಡ್‌ದಾರರು, ಬೈಸಿಕಲ್‌ಗಳನ್ನು ವಿತರಿಸಲು ಈ ಮೊದಲಿನ ಅವಧಿಗಿಂತ 30 ದಿನಗಳನ್ನು ಹೆಚ್ಚುವರಿ ಯಾಗಿ ಕೋರಿತ್ತಾರೆ. ಎಂದರೆ 90 ರಿಂದ 120 ದಿನಗಳ ಅವಧಿ, ಇದರೊಂದಿಗೆ ವಾರಂಟಿ ಮೊತ್ತ ಬೈಸಿಕಲ್ ದರದ ಶೇ.10 ರಷ್ಟು ಮೊತ್ತಕ್ಕೆ ಸಂಪೂರ್ಣವಾಗಿ ಬ್ಯಾಂಕ್ ಗ್ಯಾರಂಟಿ ಮೂಲಕ ನೀಡಲು ಕೋರಿರುತ್ತಾರೆ. ಕಳೆದ ವರ್ಷಕ್ಕಿಂತ ಪ್ರತಿ ಬೈಸಿಕಲ್ ದರ ಕಡಿಮೆ ಇರುವುದರಿಂದ ಪ್ರತಿ ಬೈಸಿಕಲ್‌ಗಳನ್ನು ರೂ.2390.00 ದರದಲ್ಲಿ ಬೈಸಿಕಲ್ ಖರೀದಿಸಲು ಸರ್ಕಾರದ ಆದೇಶ ನೀಡು ವಂತೆ ಸರ್ಕಾರವನ್ನು ಕೋರಿರುತ್ತಾರೆ.

3. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶ ನೀಡಿದೆ.

**ಸರ್ಕಾರದ ಆದೇಶ ಸಂಖ್ಯೆ ಇಡಿ : 379 ಯೋಯೋಕ 2009, ಬೆಂಗಳೂರು, ದಿನಾಂಕ: 16-11-2009**
**[ಇಡಿ: 142 : ಸ್ಕೀಮರ [ಯುನಿಕ್] 2009, ದಿನಾಂಕ: 16-11-2009]**

4. ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ 2009-10ನೇ ಸಾಲಿಗೆ ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ 8 ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ಎಲ್ಲಾ ವಿದ್ಯಾರ್ಥಿಗಳಿಗೆ [ನಗರಪಾಲಿಕೆಗಳ ಸರಹದ್ದಿನಲ್ಲಿ ಬರುವ ಶಾಲೆಗಳನ್ನು, ಹೊರತುಪಡಿಸಿ] ಉಚಿತ ಬೈಸಿಕಲ್‌ಗಳನ್ನು ವಿತರಿಸಲು ಟೆಂಡರ್ L1 ಆಗಿ ಆಯ್ಕೆಯಾಗಿರುವ ಸರಬರಾಜು ಸಂಸ್ಥೆಗಳಿಂದ ಪ್ರತಿ ಬೈಸಿಕಲ್‌ನ ಗರಿಷ್ಠ ಬೆಲೆ 2390.00ರೂಪಾಯಿಗಳು[ಎರಡು ಸಾವಿರದ ಮುನ್ನೂರ ತೊಂಭತ್ತು ರೂಪಾಯಿಗಳು ಮಾತ್ರ]
~~~~

ಮೀರದಂತೆ ಖರೀದಿಸಲು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಅನುಮತಿ ನೀಡಿದೆ.

5. ಗರಿಷ್ಠ 6.70ಲಕ್ಷ ಸೈಕಲ್‌ಗಳನ್ನು ಖರೀದಿಸಬೇಕಾಗಿದ್ದು, ಖರೀದಿ ಆದೇಶ ನೀಡುವ ಮೊದಲು ಹಿಂದಿನ ವರ್ಷದಲ್ಲಿ ಸರಬರಾಜಾಗಿ ವಿತರಣೆ ಆಗದೇ ಇರುವ ಬೈಸಿಕಲ್‌ಗಳನ್ನು ಹಂಚಿ ನಂತರ ಫಲಾನುಭವಿಗಳ ಸಂಖ್ಯೆಯಷ್ಟಕ್ಕೆ ಮಾತ್ರ ಸೀಮಿತಗೊಳಿಸಬೇಕು.

6. ಸದರಿ ಕಾರ್ಯಕ್ರಮಕ್ಕೆ ತಗಲುವ ವೆಚ್ಚದ ಮೊತ್ತವನ್ನು 2009–10ನೇ ಸಾಲಿಗೆ ಲೆಕ್ಕಶೀರ್ಷಿಕೆ 2202–02–800–1–12 [ಯೋಜನೆ] ಅಡಿ ನಿಗದಿಯಾಗಿರುವ ಅನುದಾನದಲ್ಲಿ ಭರಿಸತಕ್ಕದ್ದು. ನಂತರ ಹೆಚ್ಚುವರಿ ಆಯವ್ಯಯಕ್ಕಾಗಿ ಮರು ಹೊಂದಾಣಿಕೆ ಪ್ರಸ್ತಾವನೆಯನ್ನು ಇಲಾಖೆಗೆ ನಿಗದಿಯಾಗಿರುವ ಒಟ್ಟಾರೆ ಆಯವ್ಯಯದ ಮಿತಿಯೊಳಗೆ ಸಲ್ಲಿಸತಕ್ಕದ್ದು.

7. ಸೈಕಲ್‌ಗಳನ್ನು ಖರೀದಿ ಆದೇಶ ನೀಡಿದ್ದಂದಿನಿಂದ 120 ದಿನಗಳೊಳಗಾಗಿ ಸರಬರಾಜು ಮಾಡುವಂತೆ ಸಂಸ್ಥೆಗಳಿಗೆ ಸೂಚಿಸತಕ್ಕದ್ದು.

8. ಗುಣಮಟ್ಟದ ಉಲ್ಲಂಘನೆ ಮತ್ತು ವಿಳಂಬ ಸರಬರಾಜಿಗಾಗಿ ಸದರಿ ಸಂಸ್ಥೆಗಳಿಂದ ದಂಡ ವಸೂಲಿ ಕುರಿತಂತೆ ಸಂಸ್ಥೆಗಳೊಂದಿಗೆ ಸೂಕ್ತ ಕರಾರು ಮಾಡಿಕೊಳ್ಳತಕ್ಕದ್ದು.

9. ಸರ್ಕಾರದ ಆದೇಶ ಸಂಖ್ಯೆ ಇಡಿ:270: ಯೋಯೋಕ 2007, ದಿನಾಂಕ:15–11–2007ರಲ್ಲಿ ನಮೂದಿಸಿರುವ ಎಲ್ಲಾ ಷರತ್ತುಗಳೂ ಈ ಆದೇಶಕ್ಕೂ ಅನ್ವಯಿಸುತ್ತದೆ.

10. ಈ ಆದೇಶವನ್ನು 2009–10ನೇ ಸಾಲಿನ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಯೋಜನೆ ಮತ್ತು ಆರ್ಥಿಕ ಇಲಾಖೆಗಳು ಕ್ರಮವಾಗಿ ತಮ್ಮ ಅನಧಿಕೃತ ಟಿಪ್ಪಣಿ ಸಂಖ್ಯೆ ಯೋಇ 23 ಜಶ 2009, ದಿನಾಂಕ:–09–04–2009 ಹಾಗೂ ಆಇ: 593 ವೆಚ್ಚ–8/2009, 18–4–2009 ಮತ್ತು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ ಆ.ಇ: 1453: ವೆಚ್ಚ–8/2009, ದಿನಾಂಕ: 27–10–2009 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಹಾಗೂ ಅವರ ಹೆಸರಿನಲ್ಲಿ

[ಐ.ಎಫ್.ಮಾಗಿ]
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ[ಯೋಜನೆ]

ಗೆ :–

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
3. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ
4. ನಿರ್ದೇಶಕರು, [ಪ್ರೌಢಶಿಕ್ಷಣ], ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
5. ಮುಖ್ಯ ಲೆಕ್ಕಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
6. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
7. ಸರ್ಕಾರದ ಮುಖ್ಯಕಾರ್ಯದರ್ಶಿಯವರ ಆಪ್ತಕಾರ್ಯದರ್ಶಿ[ಸಚಿವಸಂಪುಟ], ವಿಧಾನಸೌಧ, ಬೆಂಗಳೂರು

8. ಸರ್ಕಾರದ ಉಪಕಾರ್ಯದರ್ಶಿ-2, ಆರ್ಥಿಕ ಇಲಾಖೆ ವಿಧಾನ ಸೌಧ, ಬೆಂಗಳೂರು.
9. ಸರ್ಕಾರದ ಉಪಕಾರ್ಯದರ್ಶಿ ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಶಿಕ್ಷಣ ಇಲಾಖೆ, ಬೆಂಗಳೂರು.
10. ಸರ್ಕಾರದ ಉಪಕಾರ್ಯದರ್ಶಿ ಸಚಿವ ಸಂಪುಟ, ವಿಧಾನ ಸೌಧ, ಬೆಂಗಳೂರು.
11. ಖಜಾನಾಧಿಕಾರಿಗಳು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
12. ಉಪ ನಿರ್ದೇಶಕರು, ಖಜಾನೆ ಗಣಕಕೇಂದ್ರ, ನಂ.35, ಖನಿಜ ಭವನ, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು.
13. ಸರ್ಕಾರದ ಉಪ ಕಾರ್ಯದರ್ಶಿ, ಆರ್ಥಿಕ ಇಲಾಖೆ [ಆಯವ್ಯಯ 2], ವಿಧಾನ ಸೌಧ, ಬೆಂಗಳೂರು.
14. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
15. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆರವರ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.
16. ಸಂಕಲನಾಧಿಕಾರಿ, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
17. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.